ಶ್ರೀ ಎ. ಮಸಿಯಪ್ಪ.—(ಸಿ) ಗೆ ಉತ್ತರವಾಗಿ ಇಲ್ಲಿನ ವೇಕೆನ್ಸಿಗಳನ್ನು ಗೆಜೆಟ್ಟಿನಲ್ಲಿ ಹಾಗೂ ವೇಪರುಗಳಲ್ಲಿ ಜಾಹೀರಾತುಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಈಗಾಗಲೇ ಸುಮಾರು ಆರು ತಿಂಗಳ ಹಿಂದೆಯೇ ಅಪ್ಲಿಕೆಂಟ್ಸ್‌ಗಳನ್ನು ಇಂಟರ್‌ವ್ಯೂ ಮಾಡಿ ಸೆಲೆಕ್ಷನ್ನುಗಳು ಕೂಡ ಮುಗಿದಿವೆ. ಇಲ್ಲರುವ ಜಾಗಗಳಿಗೆ ಪೋಸ್ಟಿಂಗ್ಸ್‌ಗಳನ್ನು ಮಾಡಿಲ್ಲ, ಇದಕ್ಕೆ ಕಾರಣವೇನು ?

†ಶ್ರೀ ಎಸ್. ಆರ್. ಕಂಠಿ.—ಈ ವರ್ಷದ ಅಕೆಡಮಿಕ್ ಇಯರ್‌ನಲ್ಲಿ ಇವನ್ನೆಲ್ಲಾ ಪೂರ್ತಿ ಮಾಡುತ್ತೇವೆ.

ಶ್ರೀ ಎ. ಮಸಿಯಪ್ಪ.—ಅನೇಕ ಸ್ಕೂಲುಗಳಲ್ಲಿ ಎಲಿಮೆಂಟರಿ ಹಿಂದೀ ಟೀಚ್ ಮಾಡುವ ವಿಷಯದಲ್ಲಿ ಸೂಕ್ತವಾಗಿರುವ ಶ್ರವೇಶಿಕ ಇತ್ಯಾದಿಗಳನ್ನು ಪಾಸು ಮಾಡಿರುವ ಉಪಾಧ್ಯಾಯರು ಗಳಿದ್ದಾರೆ. Fully qualified teachers ಸಿಗುವ ತನಕ ಇಂತಹ ಉಪಾಧ್ಯಾಯರುಗಳಿಗೆ ಪರ್ಮಿಷನ್ ಕೊಟ್ಟರೆ ಇಲ್ಲಿನ ಮಕ್ಕಳಿಗೂ ಹಿಂದಿ ಕಲಿಯಲು ಒಂದು ಅವಕಾಶ ಸಿಕ್ಕಿ ಅನುಕೂಲ ವಾಗುತ್ತದೆ. ಇದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಆರ್. ಕಂಠಿ.—ಹಿಂದೆ ಟೀಚರುಗಳು ಇಲ್ಲದೇ ಇರುವ ಸುಮಾರು 718 ಸ್ಕೂಲು ಗಳಲ್ಲಿ ಪೂರ್ತಿಯಾಗಿ ಹಿಂದಿ ಉಪಾಧ್ಯಾಯರುಗಳನ್ನು ಕಳುಹಿಸುವ ಏರ್ಪಾಡು ಮಾಡುತ್ತಿದ್ದೇವೆ.

STARTING OF INDUSTRIES IN PRIVATE SECTOR

*Q.—558. Sri B. BYRAPPAJI (Turuvekere).—

Will the Government be pleased to state :—

(*a*) the number and names of the various Industries which have been granted licences to start the industries in private sector in Tumkur District during the Third Five Year Plan ;

(*b*) the names of Industries already started ?

A.—Sri KONDAJJI BASAPPA (Deputy Minister for Co-operation) [on behalf of Sri K. Mallappa (Minister for Industries and Commerce)].—

(*a*) Nil.

(*b*) Does not arise.

ಶ್ರೀ ಬಿ. ಬೈರಪ್ಪಾಜಿ.—ತುಮಕೂರಿನಲ್ಲಿ ಖಾನಗಿಯವರಿಂದ ಕೈಗಾರಿಕೆ ಮಾಡುವ ವಿಚಾರ ದಲ್ಲಿ ಸರಕಾರಕ್ಕೆ ಎಷ್ಟು ಮನವಿಗಳು ಬಂದಿವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವುವೂ ಬಂದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ತುಮಕೂರಿನ ಬಳಿ ಕಾಯರ್ ಹಾಗೂ ರಬ್ಬರ್ ಇಂಡಸ್ಟ್ರೀ ಮಾಡಬೇಕೆಂದು ಲೈಸೆನ್ಸ್ ಪಡೆದು ಅದನ್ನು ಉಪಯೋಗಿಸಿಕೊಳ್ಳದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಕೈಗಾರಿಕೆಗೆ ಲೈಸೆನ್ಸ್ ಕೊಡಬೇಕಾದರೆ ಯಾರಿಗೆ ಕೊಡ ಬೇಕು, ಯಾರಿಗೆ ಅಗತ್ಯತೆ ಇದೆ ಅಂತಹವರಿಗೆ ಕೊಡದೆ, ರಾಜಕೀಯ ಬೆಳೆಸುವುದಕ್ಕೆ ಕೊಟ್ಟು, ಅವರು ಮಾರಾಟ ಮಾಡಿದ್ದಾರೆ. ಅದರಿಂದ ಬಂದ ಹಣದಿಂದ ರಾಜಕೀಯ ನಡೆಸುವುದಕ್ಕೆ ಕೊಟ್ಟಿದ್ದೀರಾ, ಅಥವಾ ಕೈಗಾರಿಕೆ ನಡೆಸುವುದಕ್ಕೆ ಕೊಟ್ಟಿದ್ದೀರಾ !

Sri KONDAJI BASAPPA.—That does not arise out of this question.

ಶ್ರೀ ಬಿ. ಬೈರಪ್ಪಾಜಿ.—ತುಮಕೂರಿನಲ್ಲಿ ಪ್ರೈವೇಟ್‌ಸೆಕ್ಟರ್‌ನಲ್ಲಿ ಇಂಡಸ್ಟ್ರೀ ನಡೆಸುತ್ತೇವೆ ಎಂದು ಕೇಳಿದ್ದರ ಮೇರೆ ಎಷ್ಟು ಜನಕ್ಕೆ ತಾವು ಲೈಸೆನ್ಸ್ ಮಂಜೂರು ಮಾಡಿದ್ದೀರಿ ಎಂದು ನಾನು ನನ್ನ ಪ್ರಶ್ನೆಯಲ್ಲಿ ಕೇಳಿದ್ದೇನೆ. ಈಗಾಗಲೇ ನಮಗೆ ತಿಳಿದಿರುವಮಟ್ಟಿಗೆ ಯಾರೋ ಒಬ್ಬರು ರಾಜ್ಯ ಸಭಾ ಮೆಂಬರಿಗೆ ರಬ್ಬರ್ ಕಾಯರ್ ಇಂಡಸ್ಟ್ರೀ ನಡೆಸುವುದಕ್ಕೆ ಲೈಸೆನ್ಸ್ ಗ್ರಾಂಟ್ ಮಾಡಿ

ದ್ದೀರಿ ಎಂದು ಗೊತ್ತಾಗಿದೆ. ಮಾನ್ಯ ಉಪಸಚಿವರು ಕೊಟ್ಟಿಲ್ಲ ಎಂದು ಹೇಳುತ್ತಾ ಇದ್ದಾರೆ. ಖಚಿತವಾಗಿ ಕೊಟ್ಟಿದ್ದಾರೆ ಎಂಬ ವರ್ತಮಾನ ನಮಗೆ ಗೊತ್ತಾಗಿದೆ, ಈ ರೀತಿ ಮಾನ್ಯ ಸಚಿವರು ಉತ್ತರ ಕೊಡುವುದು ಸರಿಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೊಟ್ಟಿಲ್ಲ.

SRI K. LAKKAPPA.—Will Government make an enquiry against the member for not utilising the licence properly ?

MR. SPEAKER.—The Government may say that the position will be examined.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತುಮಕೂರು ಜಿಲ್ಲೆಯಲ್ಲಿ ತೆಂಗಿನ ಪೊಚ್ಚೆ ಬೇಕಾದಷ್ಟು ಸಿಕ್ಕುತ್ತದೆ, ಅದರಿಂದ ನಾರನ್ನು ತಯಾರು ಮಾಡಿ ಮಾರಾಟ ಮಾಡುತ್ತಾರೆ. ಈಗ ತಾವು ಇವರಿಗೆ ಲೈಸೆನ್ಸ್ ಕೊಟ್ಟಿರುವುದರಿಂದ ನಾರು ತಯಾರು ಮಾಡತಕ್ಕವರಿಗೆ ಧಕ್ಕೆಯುಂಟಾಗಿದೆ. ಲೈಸೆನ್ಸ್ ಕೊಟ್ಟರೂ ಕೂಡ ಇಂಡಸ್ಟ್ರೀ ಪ್ರಾರಂಭ ಮಾಡದೇ ಇರತಕ್ಕ ಈ ಲೈಸೆನ್ಸ್‌ದಾರರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಲೈಸೆನ್ಸ್ ಕೊಟ್ಟೇ ಇಲ್ಲ ಎಂದು ಹೇಳಿದ್ದೇನೆ.

(Sri B. Byrappaji rose to put a supplementary).

MR. SPEAKER.—I won't allow any more supplementaries.

ಶ್ರೀ ಬಿ. ಬೈರಪ್ಪಾಜಿ.—ಲೈಸೆನ್ಸ್ ಕೊಟ್ಟಿದ್ದೀರಿ ಎಂಬುದು ಖಚಿತವಾಗಿ ಗೊತ್ತಾಗಿದೆ. ಖಚಿತವಾದ ಉತ್ತರ ಬರದೇ ಹೋದರೆ ಹೇಗೆ? ಅದನ್ನು ತಿಳಿದುಕೊಂಡು ಈಗಲೇ ಈ ಸಭೆಗೆ ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

[*No answer.*]

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬೇಕಾದರೆ ಅವರ ಹೆಸರನ್ನು ಕೊಡುತ್ತೇನೆ.

MR. SPEAKER.—The Hon'ble Member may give it in writing and I will pass it on to the Minister.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—558ನೇ ಪ್ರಶ್ನೆಗೆ ಒಂದು ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳ ಬೇಕೆಂದು ಇದ್ದೇನೆ. ಹಿಂದಿನ ಕೈಗಾರಿಕಾ ಸಚಿವರು ತುಮಕೂರಿನಲ್ಲಿ ಒಂದು ಬೈಸಿಕರ್ ಇಂಡಸ್ಟ್ರೀ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ಆಶ್ವಾಸನೆ ಕೊಟ್ಟಿದ್ದರು, ಅದು ಏನು ಆಯಿತು ?

SRI KONDAJJI BASAPPA.—I don't remember that.

SRI C. J. MUCKANNAPPA.—Sri Jatti when he was the Industries Minister, had held out a promise that he was going to start a bicycle industry in Tumkur. What has happened to that ?

MR. SPEAKER.—That is a matter which the Hon'ble Member has to settle elsewhere and not during the Question Hour.

SRI S. SIVAPPA.—Supplementary to (*a*). The answer is 'No' but it is a fact that a licence has been issued to a private individual to start a pressurised rubber and coir industry. It is a question of privilege.

MR. SPEAKER.—There is no question of privilege involved.

SRI C. J. MUCKANNAPPA.—May I know the number of applications received ?

SRI KONDAJJI BASAPPA.—I want notice.

MR. SPEAKER.—The Question Hour is over.